ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ
ರಾಜ್ಯ ಯೋಜನ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು
ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001.

ಆರ್.ಎಂ.ಎಸ್.ಎ/ಆವಿ/2012-13 ನೇ ಸಾಲಿನ ಪ್ರ.ಪ.ದೂರು/2012-13 ದಿನಾಂಕ: 18-06-2012

ಗೆ,

ಕ್ಷೇತ್ರ ಶಿಕ್ಷಣಾಧಿಕಾರಿಗಳು

ಸಾರ್ವಜನಿಕ ಶಿಕ್ಷಣ ಇಲಾಖೆ

-------------ತಾಲ್ಲೂಕು

ಮಾನ್ಯರೇ,

ವಿಷಯ: 2012-13 ನೇ ಸಾಲಿನ ಆದರ್ಶ ವಿದ್ಯಾಲಯಗಳಿಗೆ ಪ್ರವೇಶ ಪರೀಕ್ಷೆಗೆ ಹಾಜರಾಗಿರುವ ಮಕ್ಕಳ ಜಾತಿ ಬದಲಾವಣೆ ಮಾಡುವ ಬಗ್ಗೆ.

2012-13 ನೇ ಸಾಲಿಗೆ ಆದರ್ಶ ವಿದ್ಯಾಲಯಗಳಗಲ್ಲಿ 6 ನೇ ತರಗತಿಗೆ ದಾಖಲು ಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿದೆ.

ಈ ಪರೀಕ್ಷೆಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ನೀಡಲಾಗಿದೆ. ಆಯ್ಕೆ ಪಟ್ಟಿ ಪ್ರಕಟಣೆ ಆದ ಮೇಲೆ ವಿದ್ಯಾರ್ಥಿಗಳು ದಾಖಲಾತಿ ಸಮಯದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡುವಾಗ ಕೆಲವು ಪೋಷಕರು ಅರ್ಜಿಯಲ್ಲಿ ಜಾತಿಯನ್ನು ತಪ್ಪಾಗಿ ನಮೂದಿಸಿದ್ದು ಈಗ ಸರಿಪಡಿಸಲು ಹಾಗು ಪಟ್ಟಿಯನ್ನು ಪರಿಷ್ಕರಿಸಲು ಕೋರಿರುವುದಾಗಿ ಮನವಿಗಳು ಬರುತ್ತಿವೆ.

ಈ ಹಂತದಲ್ಲಿ ಪೋಷಕರು ಅರ್ಜಿ ತುಂಬುವಾಗ ಮಾಡಿರುವ ತಪ್ಪಿಗೆ ಪಟ್ಟಿಯನ್ನು ಪರಿಷ್ಕರಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಅನೇಕ ಸಮಸ್ಯೆಗಳು ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೊದಲ ಆಯ್ಕೆ ಪಟ್ಟಿಯಂತೆ ದಾಖಲಾತಿ ಮಾಡಿ ಸೀಟುಗಳು ಉಳಿದಲ್ಲಿ ನಂತರದ ಅರ್ಹತಾ ಪಟ್ಟಿಯಲ್ಲಿ ಕೊನೆಯ ವಿದ್ಯಾರ್ಥಿವರೆವಿಗೂ ಅವಕಾಶ ನೀಡುವುದು. ಇದಾದ ನಂತರ ಸೀಟುಗಳು ಖಾಲಿ ಉಳಿದಲ್ಲಿ ಮೀಸಲಾತಿ ನಿಯಮಾನುಸಾರ ಯಾವ ಪ್ರವರ್ಗದಲ್ಲಿ ಸೀಟು ಉಳಿದಿದೆ ಎಂಬುದನ್ನು ಪರಿಶೀಲಿಸಿ ಪ್ರವರ್ಗ ಗುರ್ತಿಸುವಲ್ಲಿ ನ್ಯೂನತೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಅವರು ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳನ್ನು ಆಧರಿಸಿ ಪ್ರವೇಶಕ್ಕೆ ಅವಕಾಶವನ್ನು ಮಾಡಿಕೊಡುವುದು.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ

M. N. Baig

ನಿರ್ದೇಶಕರು

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಪ್ರತಿಯನ್ನು

1. ರಾಜ್ಯದ ಎಲ್ಲಾ ಆದರ್ಶ ವಿದ್ಯಾಲಯ ಶಾಲೆಯ ಮುಖ್ಯೋಪಾಧ್ಯಾಯರುಗಳಿಗೆ
2. ಕಛೇರಿ ಪ್ರತಿ